**ಸಾಕ್ಷಿಯನ್ನು ದಿಃ 06.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎ ಸಿ ಎನ್. , ವಕೀಲರಿಂದಃ**

ಪ್ರತಿವಾದಿಗಳು ನಮ್ಮ ಗ್ರಾಮಸ್ಥರು ಮತ್ತು ಅವರ ಪರಿಚಯವಿದೆ. ದಾವಾ ಸ್ವತ್ತು ನನ್ನ ಅಣ್ಣನಿಂದ ದಾನ ಪತ್ರದ ಮೂಲಕ ನಿಪಿ.14 ರಂತೆ ಬಂದಿರುತ್ತದೆ. ನನ್ನ ಅಣ್ಣನಿಗೆ ದಿಃ22.12.1995 ರಂದು ಸದರಿ ಸ್ವತ್ತು ನಿಪಿ.15 ರಂತೆ ವೆಂಕಟಮುನಿಯಪ್ಪ ರವರಿಂದ ಖರೀದಿ ಮಾಡಿರುತ್ತಾರೆ. ನಾನು ನಿಪಿ.15 ನ್ನು ನೋಡಿದ್ದೇನೆ. ನಿಪಿ.15 ರಂತೆ ನನ್ನ ಅಣ್ಣ ಹಳೇ ಖಾತೆ ನಂ.17 ರಂತೆ ಪೂರ್ವ–ಪಶ್ಚಿಮ 39 ಅಡಿ , ಉತ್ತರ–ದಕ್ಷಿಣ 58 ವರೆ ಅಡಿಗಳೆಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಅದರ ಪೂರ್ವಕ್ಕೆ ಕೋಟೆ ಎಂದರೆ ಸರಿ , ಪಶ್ಚಿಮಕ್ಕೆ ಎತ್ತಿನ ಗಾಡಿ ರಸ್ತೆ , ಉತ್ತರಕ್ಕೆ ಚಿಕ್ಕಹೊಸರಾಯಪ್ಪನ ನಿವೇಶನ ಮತ್ತು ದಕ್ಷಿಣಕ್ಕೆ ವೆಂಕಟಸ್ವಾಮಪ್ಪನ ವಾಮೆ ಇರುತ್ತದೆ. ಸದರಿ ಚೆಕ್ಕುಬಂದಿಯಲ್ಲಿದ್ದ ಆಸ್ತಿಯನ್ನು ನನಗೆ ನನ್ನ ಅಣ್ಣ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಿಪಿ.15 ರಂತೆ ಹೇಳಿದ ಅಳತೆಯನ್ನು ನನ್ನ ಅಣ್ಣ ಖರೀದಿ ಮಾಡಿದ್ದು , ನಿಪಿ.14 ದಾನಪತ್ರ ಮಾಡುವಾಗ ಚೆಕ್ಕುಬಂದಿ ಮತ್ತು ವಿಸ್ತೀರ್ಣವನ್ನು ಬೇರೆ ಬೇರೆಯಾಗಿ ನಮೂದು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಅಣ್ಣನಿಗೆ ಮಾರಾಟ ಮಾಡಿದ ವೆಂಕಟಮುನಿಯಪ್ಪ ರವರಿಗೆ ದಿಃ09.10.1975 ರ ಕ್ರಯ ಪತ್ರದಂತೆ ಪೂರ್ವ – ಪಶ್ಚಿಮ 39 ಅಡಿ, ಉತ್ತರ – ದಕ್ಷಿಣ 33 ಅಡಿಗಳಂತೆ ಖರೀದಿ ಮಾಡಿದ್ದರು ಎಂದರೆ ಸರಿ. ಪೂರ್ವದ ಕಡೆ ನನ್ನ ಅಣ್ಣ 2012 ರಲ್ಲಿ ದಾನಪತ್ರ ಮಾಡಿದಾಗ 29 ಅಡಿ ಜಾಗವನ್ನು ಹೆಚ್ಚಾಗಿ ಬರೆದುಕೊಟ್ಟಿದ್ದಾನೆ ಎಂದರೆ ಸರಿ ಅದಕ್ಕೆ ಯಾವುದೇ ಲಿಖಿತ ರೂಪದ ವರ್ಗಾವಣೆ

ಆಗಿರುವುದಿಲ್ಲ ಮತ್ತು ಸದರಿ 29 ಅಡಿ ಜಾಗವೂ ಕೋಟೆಯ ಜಾಗವಾಗಿದ್ದು ಅದು ನಮ್ಮ ಊರ ಗೌಡರಿಗೆ ಸೇರಿದ್ದು ನಮ್ಮ ಊರ ಗೌಡರು ಸದರಿ 29 ಅಡಿ ಜಾಗವನ್ನು ನಮಗೆ ಲಿಖಿತ ರೂಪದಲ್ಲಿ ಯಾವುದೇ ಪತ್ರದ ಮೂಲಕ ಮಾಡಿಕೊಟ್ಟಿಲ್ಲ. ನಿಪಿ.14 ರಲ್ಲಿ ಹೇಳಿದ ಅಳತೆ ಮತ್ತು ವಿಸ್ತೀರ್ಣಕ್ಕೆ ನನ್ನ ಅಣ್ಣನಿಗೆ ದಾನ ಮಾಡಲು ಹಕ್ಕು ಮತ್ತು ಸ್ವಾಧೀನ ಇಲ್ಲದೇ ಇದ್ದುದ್ದರಿಂದ ನನಗೂ ಕೂಡ ಪಡೆದುಕೊಳ್ಳುವುದಕ್ಕೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ನನ್ನ ನಿವೇಶನಕ್ಕೆ ಹೋಗಲು ದಾರಿ ಬೇಕು ಅಂತ ಸಲ್ಲಿಸಿದ್ದೇನೆ. ದಾರಿ ಬೇಕಾಗಿದೆ ಎಂದು ಪಂಚಾಯಿತಿಗೂ ಸಹ ನಾನು ಅರ್ಜಿಯನ್ನು ಕೊಟ್ಟಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**